ಕರ್ನಾಟಕ ಸರಕಾರ
**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು ವಿಭಾಗ, ಲೋಕೋಪಯೋಗಿ ಬಹುಮಹಡಿ ಕಟ್ಟಡ,**
**ನೆಹರು ಮೈದಾನದ ಎದುರು, ಮಂಗಳೂರು – 575001**
**ಫೋನ್:0824–2423913, ಫ್ಯಾಕ್ಸ್–0824–2411242**
**email:** dcf_mngt@yahoo.co.in, **dcfmng@aranya.gov.in**

ಸಂಖ್ಯೆ:ಆಯವ್ಯಯ:ವಿವ:10(10)/ಟ್ರೀ ಪಾರ್ಕ್ ಟೆಂಡರ್/2019–20 ದಿನಾಂಕ: 24–04–2019

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ 2019–20ನೇ ಸಾಲಿಗೆ **ಮಂಗಳೂರು ಅರಣ್ಯ ವಿಭಾಗದ ಬಂಟ್ವಾಳ ಮತ್ತು ಸುಬ್ರಹ್ಮಣ್ಯ ವಲಯಗಳಲ್ಲಿ ನಿರ್ಮಾಣ ಹಂತದಲ್ಲಿರುವ ಟ್ರೀ ಪಾರ್ಕ್‌ಗಳಲ್ಲಿ ಪರಾಗೋಲ, ಟಿಕೆಟ್ ಕೌಂಟರ್ ಮತ್ತು ಟಾಯಿಲೆಟ್ ಬ್ಲಾಕ್ ಇತ್ಯಾದಿ ನಿರ್ಮಾಣ ಕಾಮಗಾರಿಗಳಿಗಾಗಿ** ಅರ್ಹ **ನೊಂದಾಯಿತ** ಅರಣ್ಯ ಗುತ್ತಿಗೆದಾರರುಗಳಿಂದ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಅರಣ್ಯ ಗುತ್ತಿಗೆದಾರರು ದಿನಾಂಕ:**06–05–2019** ರ ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಲಕೋಟೆಯಲ್ಲಿ ಟೆಂಡರನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಪ್ರಾದೇಶಿಕ ವಿಭಾಗ, ಮಂಗಳೂರು ಇವರಿಗೆ ಸಲ್ಲಿಸಲು ಕೋರಿದೆ. ಟೆಂಡರ್‌ದಾರರ ಸಮಕ್ಷಮದಲ್ಲಿ ಟೆಂಡರ್ ಲಕೋಟೆಯನ್ನು ಅದೇ ದಿನ ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ಸದ್ರಿ ದಿನ ಸಾರ್ವತ್ರಿಕ ರಜಾ ಎಂದು ಘೋಷಿಸಲಾದರೆ ಮುಂದಿನ ಕೆಲಸದ ದಿನದಂದು ಇದೇ ಕೆಲಸದ ಸಮಯದ ತನಕ ಟೆಂಡರನ್ನು ಸ್ವೀಕರಿಸಿ ತೆರೆಯಲಾಗುವುದು.

ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರುಟೆಂಡರನ್ನು ದಿನಾಂಕ:**10–05–2019** ರಂದು ಅಪರಾಹ್ನ 3.00 ಗಂಟೆಯೊಳಗೆ ಕರೆಯಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸದರಿ ದಿನಾಂಕದಂದೇ ಟೆಂಡರುದಾರರ ಸಮಕ್ಷಮದಲ್ಲಿ ಟೆಂಡರ್ ಲಕೋಟೆಯನ್ನು ಅದೇ ದಿನ ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು.

**ಅನುಸೂಚಿ**

| Sl. No. | Budget Head | Name of work | Location | Range | Extent (No.) | Amount (in Rs.) | EMD |
|---|---|---|---|---|---|---|---|
| | 2406-01-101-Forest Conservation, Development and Regeneration-2-Other Schemes-83-Afforestation on Forest and Non Forest Area- 139-Major Works (TREE PARK) | **Salumarada Thimmakka Tree Park, Alampuri** | | | | | |
| 1. | | Construction of Paragola | Alampuri Tree Park | Bantwal | 1 No | 5,00,000 | 12,500 |
| | | **Salumarada Thimmakka Tree Park, Kumaradhara** | | | | | |
| 2 | | Construction of late rite stone border for walking path - 456 rmt | Kumaradhara Tree Park | Subramanya | 456 RMT | 400,000 | 10,000 |
| 3 | | Construction of Cross Over Bridge | | | 3.1 RMT | 150,000 | 3,750 |
| 4 | | Construction of Front Entrance arch with gate - | | | 1 No | 400,000 | 10,000 |
| 5 | | Construction of design Paragola | | | 1 No | 500,000 | 12,500 |
| 6 | | Construction of Save tree concept | | | | 225,000 | 5,625 |
| 7 | | Construction of Ticket Counter | | | 1 No | 225,000 | 5,625 |
| 8 | | Construction of design compound wall beside front Entrance arch - | | | 15 rmt | 250,000 | 6,250 |
| 9 | | Construction of overhead tank water storage facilities with pump hose | | | | 270,000 | 6,750 |
| 10 | | Construction of men and women toilet | | | 2 No | 300,000 | 7.500 |
| 11 | | Providing & Laying of interlock pavers for vehicle Parking | | | 232 m3 | 245,000 | 6,125 |

**ಷರತ್ತುಗಳು:**

1. ಟೆಂಡರ್ ಫಾರಂ ಬೆಲೆ ರೂ. 250/–ನ್ನು (ಎಲ್ಲಾ ತೆರಿಗೆಗಳು ಸೇರಿ) ಪಾವತಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿಯಿಂದ **ದಿನಾಂಕ: 04–05–2019** ರಂದು ಅಪರಾಹ್ನ 05–30 ಗಂಟೆಯ ಒಳಗೆ ಕಛೇರಿ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳುವುದು. ಟೆಂಡರಿನ ಫಾರಂ ಮೌಲ್ಯವನ್ನು ಹಿಂದಿರುಗಿಸಲಾಗುವುದಿಲ್ಲ ಹಾಗೂ ವರ್ಗಾಯಿಸಲಾಗುವುದಿಲ್ಲ. ಹಾಗೂ ಮರುಟೆಂಡರ್ ಆದಲ್ಲಿ **ದಿನಾಂಕ:09.05.2019** ರಂದು ಅಪರಾಹ್ನ 05–30 ಗಂಟೆಯ ಒಳಗೆ ಕಛೇರಿ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳುವುದು.
2. ಟೆಂಡರ್‌ದಾರರು ಅವರ ಪೂರ್ತಿ ಹೆಸರು, ಸರಿಯಾದ ಅಂಚೆ ವಿಳಾಸ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ ಮತ್ತು ಇತರ ಎಲ್ಲಾ ರೀತಿಯ ಪೂರ್ಣ ಮಾಹಿತಿಗಳನ್ನು ನಮೂದಿಸಿರತಕ್ಕದ್ದು.
3. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚೆಯುಳ್ಳವರು **2018–19ನೇ ಸಾಲಿಗೆ ಆದಾಯ ತೆರಿಗೆ ಪಾವತಿ, ಪಾನ್, ಜಿ.ಎಸ್.ಟಿ, ಸಂಖ್ಯೆ** ಹೊಂದಿರಬೇಕು. ತಪ್ಪಿದ್ದಲ್ಲಿ ಅಂತಹವರ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
4. ಟೆಂಡರಿನಲ್ಲಿ ಭಾಗವಹಿಸುವ ಅರಣ್ಯ ಗುತ್ತಿಗೆದಾರರು ಕಂದಾಯ ಇಲಾಖೆಯಿಂದ ಪಡೆದಿ**ರುವ ರೂ.1.00 ಲಕ್ಷ ಮೌಲ್ಯದ** ರೆವೆನ್ಯೂ ಸೋಲ್ವೆನ್ಸಿ ಪತ್ರವನ್ನು ಟೆಂಡರಿನಲ್ಲಿ ಭಾಗವಹಿಸುವ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
5. ಟೆಂಡರನ್ನು/ಭಾಗಶ: ಟೆಂಡರನ್ನು ಅಥವಾ ಪೂರ್ಣ ಎಲ್ಲಾ ಟೆಂಡರನ್ನು ಅಂಗೀಕರಿಸುವುದಾಗಲೀ ಮತ್ತು ಅತೀ ಕಡಿಮೆ ಸೂಚಿಸಿದ ಟೆಂಡರನ್ನು ಯಾವುದೇ ಕಾರಣವನ್ನು ನೀಡದೇ ತಿರಸ್ಕರಿಸುವ ಹಕ್ಕನ್ನು ಈ ಕೆಳ ಸಹಿದಾರರು ಕಾಯ್ದಿರಿಸಿಕೊಂಡಿರುತ್ತಾರೆ.
6. ಸಿವಿಲ್ ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸುವವರು ನೊಂದಾಯಿತ ಲೋಕೋಪಯೋಗಿ / ಅರಣ್ಯ ಇಲಾಖೆಯ ಗುತ್ತಿಗೆದಾರರು ಮಾತ್ರ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
7. **ಟೆಂಡರಿನಲ್ಲಿ ನಮೂದಿಸಿದ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗುವ ನಿರೀಕ್ಷೆ (Subject to the availability of Funds)ಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಸದ್ರಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾದಲ್ಲಿ ಮಾತ್ರ ಕಾರ್ಯಾದೇಶ ನೀಡಲಾಗುವುದು. ಅನುದಾನ ಬಿಡುಗಡೆಯಾಗದಿದ್ದಲ್ಲಿ ಟೆಂಡರನ್ನು ರದ್ದುಗೊಳಿಸುವ ಅಧಿಕಾರ ಈ ಕೆಳ ಸಹಿದಾರರು ಹೊಂದಿರುವುದಾಗಿದೆ.**
8. **ಟೆಂಡರಿಗಿಟ್ಟಿರುವ ಕಾಮಗಾರಿಗಳಲ್ಲಿ ಯಾವುದಾದರೂ ಕಾಮಗಾರಿಗಳನ್ನು ಪೂರ್ಣವಾಗಿ / ಭಾಗಶ:ವಾಗಿ ಕಾಮಗಾರಿಗಳನ್ನು ಇಲಾಖಾ ಮೂಲಕ ಕೈಗೊಂಡಿದ್ದಲ್ಲಿ ಅಂತಹ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆಯಿಂದ ಹೊರತುಪಡಿಸಲಾಗುವುದು.**
9. ಕೆಲಸಗಳ ಪರಿಮಾಣ ಹಾಗೂ ವೆಚ್ಚ ಅಂದಾಜು ಆಗಿದ್ದು, ಮಂಜೂರಾಗುವ ಅನುದಾನದ ವ್ಯತ್ಯಾಸದಿಂದಾಗಿ ಹೆಚ್ಚು ಅಥವಾ ಕಡಿಮೆಯಾಗುವ ಯಾ ಕಾಮಗಾರಿ ಕೈ ಬಿಡುವ ಸಂಭವವಿದ್ದರೆ ಹೆಚ್ಚುವರಿಯಾದ ಕೆಲಸವನ್ನು ಸಹ ಒಪ್ಪಿಗೆಯಾದ ಟೆಂಡರಿನ ದರದಲ್ಲಿಯೇ ಆಯಾ ವಲಯ ಅರಣ್ಯಾಧಿಕಾರಿಗಳು ಸೂಚಿಸುವ ಜಾಗದಲ್ಲಿ ಮಾಡತಕ್ಕದ್ದು.
10. ಕಾಮಗಾರಿಗಳ ವಿವರಗಳನ್ನು ಸಂಬಂಧಿಸಿದ ವಲಯ ಅರಣ್ಯ ಕಛೇರಿಗಳಿಂದ ಪಡೆಯಬಹುದಾಗಿದೆ
11. ಟೆಂಡರನ್ನು ಪ್ರತಿ ಕಾಮಗಾರಿಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಸಲ್ಲಿಸಬೇಕು
12. ಇ.ಎಂ.ಡಿ.ಯನ್ನು ಕೆಳಗೆ ಸಹಿ ಮಾಡಿದವರ ಹೆಸರಿನಲ್ಲಿ ಸ್ಥಳೀಯವಾಗಿ ಪಾವತಿಯಾಗುವ ರಾಷ್ಟ್ರೀಕೃತ ಬ್ಯಾಂಕಿನ ಕ್ರಾಸ್ ಮಾಡಿದ ಡಿ.ಡಿ. ರೂಪದಲ್ಲಿ ಮಾತ್ರ ಪಡೆದು ಟೆಂಡರಿಗೆ ಲಗತ್ತಿಸಬೇಕು. ಇ.ಎಂ.ಡಿ. ಲಗತ್ತಿಸದಿದ್ದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು. ಇದರ ವಿನ: ಬೇರೆ ರೂಪದಲ್ಲಿ ಇ.ಎಂ.ಡಿ.ಯನ್ನು ಸ್ವೀಕರಿಸಲಾಗುವುದಿಲ್ಲ.
13. ಅನಿವಾರ್ಯ ಕಾರಣಗಳಿಂದ ಸ್ಥಳ ಬದಲಾವಣೆಯಾದಲ್ಲಿ ಇದೇ ನಿಬಂಧನೆಯಲ್ಲಿ ಕೆಲಸವನ್ನು ನಿರ್ವಹಿಸತಕ್ಕದ್ದು.
14. ಪ್ರಥಮ ಟೆಂಡರಿನಲ್ಲಿ ಟೆಂಡರ್ ಬಾರದೇ ಇದ್ದ ವಲಯದ ಕಾಮಗಾರಿಗಳನ್ನು ಮರು ಟೆಂಡರಿನಲ್ಲಿ ಕರೆಯಲಾಗುವುದು.
15. ಈ ಮೇಲಿನ ಕಾಮಗಾರಿ ಪರಿಮಾಣ ಮತ್ತು ಮೊತ್ತಗಳು ವ್ಯತ್ಯಾಸ ಆಗುವ ಸಂಭವ ಬಂದಲ್ಲಿ ಇದಕ್ಕೆ ಟೆಂಡರ್‌ದಾರರು ಬದ್ಧರಾಗಿರಬೇಕು.
16. ಈ ಮೇಲಿನ ಕಾಮಗಾರಿಗಳನ್ನು ಮಂಜೂರಾತಿ ನಿರೀಕ್ಷಣೆ ಮೇರೆಗೆ ಕೈಗೊಳ್ಳಲು ನಿರ್ಧರಿಸಲಾಗಿದೆ. ಅನುದಾನ ಬಿಡುಗಡೆಯಾದ ನಂತರ ಭೌತಿಕ ಪ್ರಮಾಣ ಮತ್ತು ಆರ್ಥಿಕ ಮೊತ್ತ ವ್ಯತ್ಯಾಸವಾಗುವ ಸಂಭವವಿದ್ದು, ಇದಕ್ಕೆ ಟೆಂಡರುದಾರರು ಬದ್ಧರಾಗಿರಬೇಕು.
17. ನಿರ್ದಿಷ್ಟ ಕಾರಣಗಳನ್ನು ಸೂಚಿಸದೇ ಟೆಂಡರನ್ನು ಪುರಸ್ಕರಿಸುವ ಅಥವಾ ರದ್ದುಪಡಿಸುವ ಹಕ್ಕು ಉಪ ಅರಣ್ಯ ಸಂರಕ್ಷಣಾಧಿಕಾರಿಯವರಾಗಿದ್ದು , ಟೆಂಡರಿನ ಸವಿವರವಾದ ನಿಬಂಧನೆಯನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಪಡೆದುಕೊಳ್ಳುವುದು.

18. ಮೇಲಿನ ಕಾಮಗಾರಿಯ ಮುಂದೆ ನಮೂದಿಸಿರುವ ಟೆಂಡರ್‌ನ ಪ್ರಮಾಣ ಹಾಗೂ ಮೊತ್ತದಲ್ಲಿ ವ್ಯತ್ಯಾಸವಾಗಬಹುದು.
19. ಟೆಂಡರ್ ದರವನ್ನು ನಮೂದಿಸುವಾಗ ಇಲಾಖೆಯ ಅಂದಾಜು ಮೊತ್ತದ ಮೇಲೆ ಶೇಕಡವಾರು ಇಂತಿಷ್ಟು ಹೆಚ್ಚು ಅಥವಾ ಕಡಿಮೆ ಎಂಬುದನ್ನು ಟೆಂಡರ್ ನಮೂನೆಯಲ್ಲಿ ನಿಖರವಾಗಿ ನಮೂದಿಸತಕ್ಕದ್ದು.
20. ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರು ಡಿಫಾಲ್ಟರ್ / ಕಪ್ಪುಪಟ್ಟಿಯಲ್ಲಿ ಸೇರಿದವರು / ಕಾಮಗಾರಿಯನ್ನು ಪೂರ್ಣಗೊಳಿಸದೇ ಬಿಟ್ಟು ಹೋದವರು ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅನರ್ಹರು.
21. ಟೆಂಡರ್ ಪ್ರಕಟಣೆಯಲ್ಲಿ ತೋರಿಸಿರುವ ಕಾಮಗಾರಿಗಳ ಗುರಿ ಮತ್ತು ಸ್ಥಳಗಳಲ್ಲಿ ವ್ಯತ್ಯಾಸವಾದಲ್ಲಿ ಪರಿಷ್ಕೃತ ಗುರಿ ಮತ್ತು ಪ್ರದೇಶಗಳನ್ನು ಕಾರ್ಯಾದೇಶದ ಮೊದಲು ನೀಡಲಾಗುವುದು.
22. ಟೆಂಡರಿನಲ್ಲಿ ಬಾಗವಹಿಸಲು ಇಚ್ಚೆಯುಳ್ಳವರು ಈ ವಿಭಾಗದಲ್ಲಿ 2019–20ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ಈ ಕಚೇರಿಯಲ್ಲಿ ನೋಂದಾಯಿಸಿ ಕೊಂಡಿರಬೇಕು ಅಥವಾ ಈಗಾಗಲೇ ನೊಂದಾಯಿಸಿ ಕೊಂಡವರು ನವೀಕರಿಸಿ ಕೊಂಡಿರಬೇಕು ಹಾಗೂ ಆದಾಯ ತೆರಿಗೆ, ಪಾನ್ / ಜಿಎಸ್‌ಟಿ / ಟಿನ್ ಸಂಖ್ಯೆ ಹೊಂದಿರಬೇಕು ತಪ್ಪಿದಲ್ಲಿ ಅಂತಹವರ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
23. ಪ್ರತಿ ಟೆಂಡರುದಾರರು ಮೇಲಿನ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಿರುವ ಸಾಮಾಗ್ರಿ ಸಲಕರಣೆಗಳ ಸರಬರಾಜು ಮಾಡುವ ಪರಿಕರಗಳ ಸಾಗಾಣಿಕೆ ವ್ಯವಸ್ಥೆಯನ್ನು ಅವರ ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳಬೇಕು.
24. ಗುತ್ತಿಗೆದಾರರು ಅವರದೇ ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಲ್ಪಟ್ಟಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಇದರ ಬಗ್ಗೆ ಏನಾದರೂ ತಕರಾರು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರ ತೀರ್ಮಾನವೇ ಅಂತಿಮವಾಗಿರುತ್ತದೆ.
25. ಕಾಮಗಾರಿಯನ್ನು ಪೂರ್ಣಗೊಳಿಸಿ ಚೆಕ್‌ಮೆಜರ್‌ಮೆಂಟ್ ಮಾಡಿಸಿ ಸಾದಿಲ್ವಾರು ವೆಚ್ಚದ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ಅನುವು ಮಾಡಿಕೊಡತಕ್ಕದ್ದು.
26. ಅತೀ ಕಡಿಮೆ ಸೂಚಿಸಿರುವ ಟೆಂಡರ್ ದರ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅದರಲ್ಲಿ ಟೆಂಡರನ್ನು ಒಪ್ಪಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ. ಅಲ್ಲದೇ ಅಂತಹ ಟೆಂಡರ್‌ದಾರರೊಂದಿಗೆ ರಾಜಿ ಒಪ್ಪಂದ ಮಾಡಲಾಗುವುದು. ಹೀಗೆ ರಾಜಿ ಒಪ್ಪಂದದಲ್ಲಿ ತೀರ್ಮಾನಿಸಿರುವುದನ್ನು ಒಪ್ಪಿಕೊಳ್ಳಲು ಬದ್ಧರಿರಬೇಕು.
27. ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರಿಂದ ತಿಳುವಳಿಕೆ ನೀಡಿದ 7 ದಿನಗಳ ಒಳಗಾಗಿ ಈ ಕಛೇರಿಗೆ ಹಾಜರಾಗಿ ರೂ. 200/–ಗಳ ಮೌಲ್ಯದ ಛಾಪಾ ಕಾಗದದಲ್ಲಿ ಕರಾರುನಾಮೆ ಮಾಡಿಸಿಕೊಂಡು ಅದರಲ್ಲಿ ಸಹಿ ಮಾಡಿ ಕಾರ್ಯಾದೇಶ ಪಡೆದುಕೊಂಡು ನಿಗದಿಪಡಿಸಿದ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು. ಕೆಲಸದ ಅವಧಿಯನ್ನು ವಿಸ್ತರಿಸುವ ಅಥವಾ ಕೈಬಿಡುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೊಂದಿರುತ್ತಾರೆ.
28. ಮೇಲಿನ ಕಾಮಗಾರಿಗಳ ಅನುಷ್ಠಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯ ನಿಬಂಧನೆಗೆ ಒಳಪಟ್ಟಿರುತ್ತದೆ ಹಾಗೂ 2019–20ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಮೇರೆಗೆ ಟೆಂಡರ್ ಪ್ರಕಟಣೆಯನ್ನು ಕರೆಯಲಾಗಿದೆ. ಒಂದು ಪಕ್ಷ ಸರ್ಕಾರದಿಂದ ಹಣ ಬಿಡುಗಡೆಯಾಗಲು ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

29. ಎಲ್ಲಾ ಕೆಲಸಗಳು ಅಗ್ಗಿಂದಾಗೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ಸಂಬಂಧಿಸಿದ ಅಧಿಕಾರಿಗಳಿಂದ ತನಿಖೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಅಳತೆ ಪುಸ್ತಕದೊಂದಿಗೆ (ಎಂ.ಬಿ/ಎಫ್‌ಎನ್‌ಬಿ) ಒಪ್ಪಿಸಬೇಕಾಗುತ್ತದೆ ಮತ್ತು ಬಿಲ್ ಸಂದಾಯ ಮಾಡುವಾಗ ಸದರಿ ಬಿಲ್‌ಗಳನ್ನು ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ, ಜಿಎಸ್‌ಟಿ, ಸರ್‌ಚಾರ್ಜ್ ಮತ್ತು ಭದ್ರತಾ ಠೇವಣಿ ಹಣವನ್ನು ಕಡಿತಗೊಳಿಸಲಾಗುವುದು ಮತ್ತು ಅಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಕಡಿತಗೊಳಿಸಲಾಗುವುದು.
30. ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತಿತರ ಅನುಕೂಲಗಳನ್ನು ಸ್ವತ: ಗುತ್ತಿಗೆದಾರರೇ ನಿರ್ವಹಿಸಬೇಕು. ಇಲಾಖೆಯು ಗುತ್ತಿಗೆದಾರರು ಮತ್ತು ಅವರ ನೌಕರರಿಗೆ ಆಗಬಹುದಾದ ಯಾವುದೇ ನಷ್ಟ ಇತ್ಯಾದಿಗಳಿಗೆ ಜವಾಬ್ದಾರರಲ್ಲ.
31. ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜು ದರವಾಗಿರುತ್ತದೆ. (ಅಪ್ರಾಕ್ಸಿಮೇಟ್) ಹಣವನ್ನು ಪಾವತಿಸುವಾಗ ಪೂರ್ಣಗೊಂಡ ಕೆಲಸಕ್ಕೆ ಮಂಜೂರಾದ ಅಂದಾಜು ಪಟ್ಟಿಯಂತೆ ಪಾವತಿಸಲಾಗುವುದು.

32. ಸದ್ರಿ ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಗೆ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ / ಮೌಖಿಕ ಆದೇಶಕ್ಕನುಗುಣವಾಗಿ ಇರತಕ್ಕದ್ದು, ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡು ಬಂದಲ್ಲಿ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ದರಾಗಿರಬೇಕಾಗುತ್ತದೆ.

33. ಕಾಮಗಾರಿಗಳನ್ನು ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ಪೂರ್ಣಗೊಳಿಸತಕ್ಕದ್ದು. ಗುತ್ತಿಗೆಯ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಅತೀ ವಿಶೇಷ ಸಂದರ್ಭಗಳು ಬಂದಲ್ಲಿ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಗುತ್ತಿಗೆ ದರಗಳಲ್ಲಿ ಶೇ 5 ರ ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ನೀಡಿದ ನಿರ್ದೇಶನದಂತೆ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ. ಮತ್ತು ಇಎಂಡಿ ಹಾಗು ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

34. ಅರಣ್ಯ ಕೂಲಿಕಾರರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಚಿಸಿದ್ದಲ್ಲಿ ಇ..ಎಂ.ಡಿ ಮತ್ತು ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು. ಹಾಗು ಸಂಘಗಳ ನೋಂದಣಿ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೋಂದಣಿಯಾಗಿರಬೇಕು ಇಲ್ಲವಾದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

35. ಯಶಸ್ವಿ ಟೆಂಡರುದಾರರು **ಟೆಂಡರ್ ಮೊತ್ತದ ಶೇಕಡಾ 5 ರಷ್ಟು ಭದ್ರತಾ ಠೇವಣಿಯನ್ನು** ಕರಾರುನಾಮೆ ಮಾಡುವ ದಿನದಂದು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರ ಹೆಸರಿಗೆ ಪಡೆದು ಹಾಜರುಪಡಿಸತಕ್ಕದ್ದು

36. ಯಶಸ್ವಿ ಟೆಂಡರುದಾರರು ಕರಾರುನಾಮೆಯನ್ನು ಸಹಿ ಮಾಡಿದ ನಂತರ ಟೆಂಡರನ್ನು ಹಿಂತೆಗೆದುಕೊಂಡಲ್ಲಿ ನಿಗದಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರುದಾರರ ಇ.ಎಂ.ಡಿ ಮತ್ತು ಭದ್ರತಾ ಠೇವಣಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಮರುಟೆಂಡರ್ ಮಾಡಲಾಗುವುದು. ಟೆಂಡರ್‌ಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ರ ಕಲಂ 109 ಮತ್ತು 119 ರಂತೆ ಭೂ ಕಂದಾಯ ವಸೂಲಿಯಂತೆ ವಸೂಲು ಮಾಡಲಾಗುವುದು.

37. ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಅವರಿಗೆ ಹಣ ಪಾವತಿಸುವಾಗ ಬಿಲ್ಲಿನ ಮೊತ್ತ ರೂ. 5.00 ಲಕ್ಷದ ವರೆಗೆ ಶೇ 5 ರಷ್ಟು ರೂ 5.00 ಲಕ್ಷಕ್ಕೆ ಮೇಲ್ಪಟ್ಟು ರೂ 10.00 ಲಕ್ಷದವರೆಗೆ ಶೇ 5.5 ಮತ್ತು 10 ಲಕ್ಷದಿಂದ 20 ಲಕ್ಷದವರೆಗೆ ಶೇಕಡಾ 6 ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು. ಈ ಹಣವನ್ನು ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸುವ ಬಗ್ಗೆ ದೃಢೀಕರಣ ಪತ್ರ ಪಡೆದು 1 ವರ್ಷಗಳು ಕಳೆದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.

38. ಕೆಲಸ ಪೂರ್ಣಗೊಂಡ ದಿನಾಂಕದಿಂದ 1 ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ದೋಷ ಕಂಡು ಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ದೋಷ ಪರಿಹರಿಸಬೇಕಾಗುವುದು ನಂತರ ಇಎಂಡಿ ಮತ್ತು ಭದ್ರತಾ ಠೇವಣಿಯನ್ನು ಹಿಂತಿರುಗಿಸಲಾಗುವುದು. ತಪ್ಪಿದ್ದಲ್ಲಿ ಇಎಂಡಿ ಮತ್ತು ಭದ್ರತಾ ಠೇವಣಿಯಲ್ಲಿ ಸದರಿ ಖರ್ಚನ್ನು ಭರಿಸಲಾಗುವುದು.

39. ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ ಇನ್ನಿತರ ಹಾನಿಗಳು ಸಂಭವಿಸಿದ್ದಲ್ಲಿ ನಷ್ಟ ಪರಿಹಾರವನ್ನು ಗುತ್ತಿಗೆದಾರರೇ ನೀಡಬೇಕಾಗಿರುತ್ತದೆ.

40. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು

41. ಕಾಲಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ವಿಧಿಸುವ ಷರತ್ತಿಗೆ ಗುತ್ತಿಗೆದಾರರು ಬದ್ಧರಾಗಿರಬೇಕು.

42. ಅರಣ್ಯ ಗುತ್ತಿಗೆದಾರರು ಟೆಂಡರಿನ ಜೊತೆಯಲ್ಲಿ ಆದಾಯ ತೆರಿಗೆ, ಜಿಎಸ್‌ಟಿ, ತೀರುವಳಿ ಪತ್ರಗಳನ್ನು ಸಂಬಂಧಿಸಿದ ಇಲಾಖೆಗಳಿಂದ ಪಡೆದು ಸಲ್ಲಿಸುವುದು. ಈ ವಿಷಯದಲ್ಲಿ ಅಂತಿಮವಾಗಿ ಯಾವುದೇ ತಿದ್ದುಪಡಿಯನ್ನು ಮಾಡುವ ನಿಯಮ ನಿಬಂಧನೆ ಸೇರಿರುವ ಅಧಿಕಾರ ಈ ಕೆಳ ಸಹಿದಾರರಾಗಿರುತ್ತದೆ. ಗುತ್ತಿಗೆದಾರರು ಇದಕ್ಕೆ ಬದ್ಧರಾಗಿರಬೇಕು.

43. ಅಪ್ರಾಪ್ತ ವಯಸ್ಕರು ಕಾನೂನಿನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿಗಳಿಂದ ಟೆಂಡರನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಇಲಾಖೆಗೆ ಸದರಿ ವ್ಯಕ್ತಿಗಳು ಟೆಂಡರು ಹಾಕಿ ನಂತರ ಅದು ತಿಳಿದಲ್ಲಿ ಅಂತಹವರ ಗುತ್ತಿಗೆಯನ್ನು ಅನೂರ್ಜಿತಗೊಳಿಸಲಾಗುವುದು ಮತ್ತು ಅವರು ಇಲಾಖೆಯಲ್ಲಿ ಇಟ್ಟಿರುವ ಇ.ಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

44. ಟೆಂಡರು ಮಂಜೂರಾತಿಯ ಬಗ್ಗೆ ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು ಅಲ್ಲಿಯವರೆಗೆ ಕಡಿಮೆ ಟೆಂಡರ್‌ದರ ನಮೂದಿಸಿರುವ ಗುತ್ತಿಗೆದಾರರ ಇಎಂಡಿ ಹಣವನ್ನು ಹಿಂತಿರುಗಿಸಲಾಗುವುದಿಲ್ಲ ಹಾಗೂ ಈ ಅವಧಿಯಲ್ಲಿ ಟೆಂಡರನ್ನು ವಾಪಾಸ್ಸು ಪಡೆಯಲು ಅವಕಾಶವಿರುವುದಿಲ್ಲ.
45. ಕೆಲಸಗಳ ವಿವರ, ಹೆಚ್ಚಿನ ಮಾಹಿತಿ ಹಾಗೂ ನಿಬಂಧನೆಗಳ ಬಗ್ಗೆ ಈ ಕೆಳ ಸಹಿದಾರರ ಕಛೇರಿಯಿಂದ ಹಾಗೂ ಸಂಬಂದಪಟ್ಟ ವಲಯಗಳಿಂದ ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.
46. ಟೆಂಡರು ವಿಷಯದಲ್ಲಿ ವಿವಾದ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವೃತ್ತ , ಮಂಗಳೂರು ಇವರು ಅಪೀಲು ಅಧಿಕಾರಿಯಾಗಿದ್ದು ಅವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. ನ್ಯಾಯಿಕ ವ್ಯಾಜ್ಯಗಳು ದ.ಕ ಜಿಲ್ಲೆಯ ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ.
47. ಭಾಗಶಃ ಕೆಲಸ ಅಪೂರ್ಣ ಕಾಮಗಾರಿ ಮಾಡಿದ ಪ್ರಸಂಗದಲ್ಲಿ ಅಂತಹ ಭಾಗಶಃ ಅಪೂರ್ಣ ಕಾಮಗಾರಿಗಳಿಗೆ ಯಾವುದೇ ಹಣ ಪಾವತಿ ಮಾಡುವುದಿಲ್ಲ. ಅಲ್ಲದೆ, ಟೆಂಡರುದಾರರ ಸ್ವಜವಾಬ್ದಾರಿಯ ಮೇಲೆ ಕಾಮಗಾರಿಯನ್ನು ಕಾನೂನಿನ್ವಯ ಕಾರ್ಯಗತಗೊಳಿಸಲಾಗುವುದು ಅಲ್ಲದೆ ಸದರಿ ಗುತ್ತಿಗೆದಾರರ ಇ.ಎಂ.ಡಿ ಹಣವನನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
48. ನರ್ಸರಿಯಲ್ಲಿ ಸಸಿ ಬೆಳೆಸುವ ಕೆಲಸಗಳಿಗೆ ಟೆಂಡರ್ ಹಾಕುವವರು ಸದ್ರಿ ಕೆಲಸ ಮಾಡಿರುವ ಬಗ್ಗೆ ಸ್ಥಳೀಯ ವಲಯ ಅರಣ್ಯ ಅಧಿಕಾರಿ / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ ರವರಿಂದ ಅನುಭವ ಪ್ರಮಾಣ ಪತ್ರವನ್ನು ಟೆಂಡರ್‌ನ ಜೊತೆಯಲ್ಲಿ ಲಗತ್ತಿಸಿರತಕ್ಕದ್ದು: ತಪ್ಪಿದಲ್ಲಿ ಟೆಂಡರನ್ನು ತಿರಸ್ಕೃತಗೊಳಿಸಲಾಗುವುದು.
49. ಈ ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ ಆರ್‌ಬಿಟ್ರೇಶನ್ ಕೇಂದ್ರ (ದೇಶಿಯ ಮತ್ತು ಅಂತರ್ ದೇಶೀಯ) ನಿಯಮಗಳು 2012 ರ ಅಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಿಕೊಳ್ಳಲು ಒಪ್ಪಿಕೊಳ್ಳಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವಿಭಾಗ, ಮಂಗಳೂರು